ದಿ:**11.1.2017** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ವಕೀಲರಿಂದ:-

ಕಳೆದ 5-6 ತಿಂಗಳಿನಿಂದ ನನಗೆ ಈ ಕೇಸಿನ ವಿದ್ಯಾಮಾನಗಳು ಗೊತ್ತು. 1ನೇ ಪ್ರತಿವಾದಿ ಸೊಸೈಟಿಯವರು ಯಾವ ಸರ್ವೆ ನಂ.ನಲ್ಲಿ ನಿವೇಶನಗಳನ್ನು ಮಾಡಿದ್ದಾರೆ ಅಂತ ನನಗೆ ಗೊತ್ತಿಲ್ಲ. ಆದರೆ ಆ ಜಮೀನುಗಳು ಯರಗನಹಳ್ಳಿ ಗ್ರಾಮಕ್ಕೆ ಸೇರಿದ ಜಮೀನುಗಳು ಇರುತ್ತವೆ. ದಾವಾ ಸರ್ವೆ ನಂ. ಯಾವ ಗ್ರಾಮಕ್ಕೆ ಸೇರಿದ ಜಮೀನು ಅಂತ ನನಗೆ ಗೊತ್ತಿಲ್ಲ.

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಒಎಸ್ 117/91 ಮತ್ತು 289/96 ರ ದಾವೆಗಳ ಬಗ್ಗೆ ಹೇಳಿದ್ದೇನೋ ಇಲ್ಲವೋ ಮರೆತಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರ ತಯಾರು ಮಾಡಲು ನಾನು ಯಾವುದೇ ಮಾಹಿತಿ ಕೊಟ್ಟಿಲ್ಲ ಅನ್ನುವುದು ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರ ಯಾರ ಮೇಲೆ ಕೇಸನ್ನು ಮಾಡಲಾಗಿದೆ ಅಂತ ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿಲ್ಲ.

ನಮ್ಮ ತಾಯಿ ಕೊಂಡ ಸೈಟಿನ ಪೂರ್ವಕ್ಕೆ ಡಾ.ರಾಜಕುಮಾರ್ ರಸ್ತೆ ಇದೆ. ಸದರಿ ರಸ್ತೆ ಪಶ್ಚಿಮದ ಕಡೆಗೆ ಎಷ್ಟು ಸೈಟುಗಳು ಇದ್ದಾವೆ ಅಂತ ನನಗೆ ಗೊತ್ತಿಲ್ಲ. ನಮ್ಮ ತಾಯಿ ಕೊಂಡ ಸೈಟಿನ ಅಕ್ಕ ಪಕ್ಕದಲ್ಲಿ ಎಷ್ಟು ಸೈಟುಗಳು ಇದ್ದಾವೆ ಅಂತ ನನಗೆ ಹೇಳಲು ಆಗುವುದಿಲ್ಲ. ಮೇಲೆ ಹೇಳಿದ ಎರಡೂ ದಾವೆಗಳಲ್ಲಿ ಈ ಕೇಸಿನ ವಾದಿ ಪಾರ್ಟಿ ಇದ್ದರೋ ಇಲ್ಲವೋ ನನಗೆ ಈಗ ಹೇಳಲು ಆಗುವುದಿಲ್ಲ.

ದಾವಾ ಆಸ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ಯಾವುದೇ ಭಾಗದ ಮೇಲೆ ಯಾವುದೇ ರೀತಿ ಹಕ್ಕು ಇರುವುದಿಲ್ಲ. ನಮ್ಮ ಸ್ವತ್ತೇ ಬೇರೆ ಮತ್ತು ದಾವಾ ಸ್ವತ್ತು ಬೇರೆ ಎಂದರೆ ಸರಿ. ದಾವಾ ಆಸ್ತಿ ಅನ್ಯಕ್ರಾಂತ ಆಗಿದೆಯೋ ಅನ್ನುವುದು ನನಗೆ ಗೊತ್ತಿಲ್ಲ. ಮೇಲೆಹೇಳಿದ ಎರಡೂ ದಾವೆಗಳಲ್ಲಿ ಏನು ಆಯಿತು ಅನ್ನುವುದನ್ನು ನಾನು ತಿಳಿದುಕೊಂಡಿಲ್ಲ.

Res-judicata ಅಂದರೆ ಏನು ಅಂತ ನನಗೆ ಗೊತ್ತಿಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ಯಾವುದೇ ತೊಂದರೆ ಇಲ್ಲ. ನಾನು ಬಿ ಇ ಮಾಡಿದ್ದೇನೆ. ಈಗ ಸದ್ಯ ಏನೂ ಕೆಲಸ ಮಾಡುತ್ತಿಲ್ಲ.

ಡಾ.ರಾಜಕುಮಾರ್ ರಸ್ತೆಯ ಪಶ್ಚಿಮದ ಕಡೆಗೆ ಕೆಲವು ಕಾಪೌಂಡ್ ಹಾಕಲಾಗಿದೆ. ಸೊಸೈಟಿರವರು ನಮ್ಮ ತಾಯಿಗೆ ಸೇರಿದ ಸೈಟನ್ನು ತೋರಿಸಿದ್ದಾರೆ , ಆದರೆ ಯಾರು ತೋರಿಸಿದ್ದಾರೆ ಅಂತ ನನಗೆ ಗೊತ್ತಿಲ್ಲ. ಯರಗನಹಳ್ಳಿ ಗ್ರಾಮದ ಎಲ್ಲೆ ಡಾ.ರಾಜಕುಮಾರ್ ರಸ್ತೆಯ ಪೂರ್ವಕ್ಕೆ ಮಾತ್ರ ಇರುತ್ತದೆ ಅನ್ನುವುದು ಸರಿಯಲ್ಲ. ಸದರಿ ಡಾ.ರಾಜಕುಮಾರ್ ರಸ್ತೆಯ ಪಶ್ಚಿಮಕ್ಕೆ ಇರುವ ಜಮೀನುಗಳು/ಸ್ವತ್ತುಗಳು ಕ್ಯಾತಮಾರನಹಳ್ಳಿ ಗ್ರಾಮದ ವ್ಯಾಪ್ತಿಗೆ ಬರುವ ಆಸ್ತಿಗಳು ಇದ್ದಾವೆ ಎಂದರೆ ಸರಿ.

ನಮ್ಮ ತಾಯಿಯ ಸೈಟು ನಂ.22 ಅದಕ್ಕೆ ಕಾಪೌಂಡ್ ಹಾಕಿಲ್ಲ. ಸದರಿ ರಸ್ತೆಯ ಪಶ್ಚಿಮದ ಕಡೆ ಇರುವ ನಿವೇಶನಗಳಿಗೆ ಕಾಪೌಂಡ್ ಹಾಕುವ ಕಾಲಕ್ಕೆ ವಾದಿ ಮತ್ತು ಪ್ರತಿವಾದಿಗಳಿಗೆ ಜಗಳ ಆಗಿತ್ತು ಎಂದರೆ ಸರಿ. ಸೊಸೈಟಿರವರು ವಾದಿಗೆ ಸೇರಿದ ಜಾಗದಲ್ಲಿ ಸೈಟು ಮಾಡಿದ್ದೇವೆ ಅಂತ ಹೇಳಿ ನಿಮಗೆ ಸೈಟನ್ನು ಅಲಾಟ್ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸೊಸೈಟಿರವರು ನಮ್ಮ ತಾಯಿಗೆ ಸೈಟನು ಅಲಾಟ್ ಮಾಡಿರುತ್ತಾರೆ ಅಂತ ಹೇಳುತ್ತಾರೆ. ಆ ಸದರಿ ಡಾ.ರಾಜಕುಮಾರ್ ರಸ್ತೆಯ ಪಶ್ಚಿಮದ ಕಡೆಗೆ ಇರುವ ಸ್ವತ್ತಿನ ಮೇಲೆ ಸೊಸೈಟಿರವರಿಗಾಗಲೀ ಅಥವಾ ಸೊಸೈಟಿರವರಿಂದ ಪಡೆದ ವ್ಯಕ್ತಿಗಳಿಗಾಗಲೀ ಯಾವುದೇ ಹಕ್ಕು ಅಥವಾ ಅಧಿಕಾರ ಇಲ್ಲ ಅನ್ನುವುದು ಸರಿಯಲ್ಲ.

ನನ್ನ ತಾಯಿಗೆ ಅಲಾಟ್ ಮಾಡಿರುವ ನಿವೇಶನ ಯರಗನಹಳ್ಳಿ ಗ್ರಾಮದ ಯಾವ ಸರ್ವೆ ನಂ.ನಲ್ಲಿ ಬರುತ್ತದೆ ಅಂತ ನನಗೆ ಹೇಳಲು ಆಗುವುದಿಲ್ಲ. ಈ ಕೇಸಿನ ಬಗ್ಗೆ ನನಗೇನೂ ಮಾಹಿತಿ ಇಲ್ಲ , ಆದರೆ 1ನೇ ಪ್ರತಿವಾದಿ ಸೊಸೈಟಿರವರ ಮಾತನ್ನು ಕೇಳಿ ಎಲ್ಲಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ವಾದಿ ಜಾಗವನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಿಡಿ-32 ರಿಂದ ನಿಡಿ-43 ನ್ನು 1ನೇ ಪ್ರತಿವಾದಿ ಜೊತೆ ಶಾಮೀಲಾಗಿ ಸೃಷ್ಟನೆ ಮಾಡಿರುತ್ತೇವೆ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಇದೆ,

Sd/-

ಲಘು ವ್ಯವಹಾರಗಳ ಮತ್ತು ಸಿವಿಲ್

ನ್ಯಾಯಾಧೀಶರು (ಹಿ.ವಿ), ಮೈಸೂರು.